ಕರ್ನಾಟಕ ಸರ್ಕಾರ
**ಪಂಚಾಯತ್ ರಾಜ್ ಆಯುಕ್ತಾಲಯ**
**ಕಾಳಿದಾಸ ರಸ್ತೆ, ಗಾಂಧಿನಗರ ಬೆಂಗಳೂರು – 560 009.**

ಸಂಖ್ಯೆ.:ಕಪಂರಾಆ/ಅಭಿವೃದ್ಧಿ/ಎಲ್‌ಆದಿ/ 417/2024 ದಿನಾಂಕ: 03.06.2024.

**ಸುತ್ತೋಲೆ**

**ವಿಷಯ:** ಗ್ರಾಮ ಪಂಚಾಯತಿ ಅರಿವು ಕೇಂದ್ರಗಳಲ್ಲಿ **ಜೂನ್ 11 ರಂದು "ಅಂತರ ರಾಷ್ಟ್ರೀಯ ಆಟದ ದಿನ"** ದ ಅಂಗವಾಗಿ **ಆಟದ ಹಕ್ಕನ್ನು** ಸಂಭ್ರಮಿಸಲು ಚಟುವಟಿಕೆಗಳನ್ನು ಆಯೋಜಿಸುವ ಕುರಿತು

***

ವಿಶ್ವಸಂಸ್ಥೆಯು ಅಂಗೀಕರಿಸಿ, ಘೋಷಿಸಿದ ದಿನವಾದ "ಅಂತರ ರಾಷ್ಟ್ರೀಯ ಆಟ"ದ ದಿನ ಜೂನ್ 11 ಕ್ಕೆ ವಿಶ್ವಸಂಸ್ಥೆಯ ಸದಸ್ಯತ್ವ ಹೊಂದಿರುವ, ಅದರಲ್ಲೂ ಅಂತರ ರಾಷ್ಟ್ರೀಯ ಮಕ್ಕಳ ಹಕ್ಕುಗಳ ಒಡಂಬಡಿಕೆಯನ್ನು ಒಪ್ಪಿರುವ ಎಲ್ಲಾ ದೇಶಗಳೂ ಬದ್ಧರಾಗಿರುತ್ತಾರೆ.

ವಿಶ್ವಸಂಸ್ಥೆಯ ಈ ಘೋಷಣೆಗೆ ಕಾರಣವಾದ, ಪ್ರಪಂಚದಾದ್ಯಂತ ಮಕ್ಕಳು ನಡೆಸಿದ ಅಭಿಯಾನದಲ್ಲಿ ವಿವಿಧ ಸಂಸ್ಥೆಗಳು ಮುಂದಾಳತ್ವ ವಹಿಸಿ **ವಿಶ್ವಸಂಸ್ಥೆಗೆ ಮಾಡಿದ ಶಿಫಾರಸ್ಸುಗಳ ಪ್ರಕ್ರಿಯೆಯಲ್ಲಿ ನಮ್ಮ ರಾಜ್ಯದ ಉಡುಪಿ ಹಾಗೂ ವಿಜಯನಗರ ಜಿಲ್ಲೆಯ ವಿವಿಧ ಪರಿಸ್ಥಿತಿಯಲ್ಲಿರುವ ಮಕ್ಕಳು ಭಾಗವಹಿಸಿದ್ದರು** ಎಂಬುವುದು ಹೆಮ್ಮೆಯ ಸಂಗತಿಯಾಗಿದೆ. ವಿವಿಧ ದೇಶಗಳ ಸುಮಾರು 10,000 ಕ್ಕೂ ಹೆಚ್ಚು ಮಕ್ಕಳನ್ನು ಒಳಗೊಂಡ, ಜಾಗತಿಕ ಮಟ್ಟದಲ್ಲಿ ವ್ಯಾಪಕವಾಗಿ ನಡೆಸಿದ ಈ ಅಭಿಯಾನದಲ್ಲಿ ಅಂತರ ರಾಷ್ಟ್ರೀಯ ಮಟ್ಟದ 'ಮಕ್ಕಳು ಮತ್ತು ಯುವ ಜನರ ಸಲಹಾ ಗುಂಪಿನ (CAYAG)' ಸದಸ್ಯರಾಗಿ **ಈ ಮಕ್ಕಳು ಭಾಗವಹಿಸಿರುತ್ತಾರೆ. ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್ ಸಂಸ್ಥೆ**ಯು ಈ ಮಕ್ಕಳ ಭಾಗವಹಿಸುವಿಕೆಗೆ ನೆರವು ನೀಡಿರುತ್ತದೆ.

ಅಂತರ ರಾಷ್ಟ್ರೀಯ ಮಕ್ಕಳ ಹಕ್ಕುಗಳ ಒಡಂಬಡಿಕೆಯ ಅನುಸಾರವಾಗಿ 18 ವರ್ಷದೊಳಗಿನ ಎಲ್ಲಾ ಮಕ್ಕಳು ಮತ್ತು ಯುವಜನರಿಗೆ ಆಡುವ ಹಕ್ಕು ಅನ್ವಯಿಸುತ್ತದೆ. ಮಗುವನ್ನು 18 ವರ್ಷದೊಳಗಿನ ಎಲ್ಲಾ ವ್ಯಕ್ತಿಗಳು ಎಂದು ವ್ಯಾಖ್ಯಾನಿಸಲಾಗಿದೆ.

ಪ್ರಮುಖವಾಗಿ ಆಯಾ ಗ್ರಾಮ ಪಂಚಾಯತಿ ವ್ಯಾಪ್ತಿಯ ಅತ್ಯಂತ ದುರ್ಬಲ ವರ್ಗಗಳ, ಹಿಂದುಳಿದ ಪ್ರದೇಶಗಳ, ವಿಶೇಷವಾಗಿ ಆಡಲು ಅತ್ಯಂತ ಕಡಿಮೆ ಅವಕಾಶ ಸಿಗುವವರನ್ನು, ವಿಶೇಷಚೇತನ ಸ್ನೇಹಿ ಮಕ್ಕಳು, ಶಾಲೆಯಿಂದ ಹೊರಗುಳಿದ ಮತ್ತು ದುಡಿಯುವ ಮಕ್ಕಳು ಇವರನ್ನು ಹೆಚ್ಚಾಗಿ ಕೇಂದ್ರೀಕರಿಸಬೇಕು; ಎಲ್ಲಾ ಮಕ್ಕಳೂ ಒಳಗೊಳ್ಳುವಂತಾಗಬೇಕು.

**ಆಟವನ್ನು ಮಕ್ಕಳ ಹಕ್ಕಾಗಿ ಪರಿಗಣಿಸುವುದು**

ಏಕೆಂದರೆ, **"ಆಟವು"** ಮಹತ್ವಪೂರ್ಣವಾಗಿದ್ದು ಈ ಕೆಳಗಿನ ಅಂಶಗಳೊಂದಿಗೆ ನೇರ ಸಂಬಂಧ ಹೊಂದಿದೆ ಎಂಬುದನ್ನು ಸದಾ ಗಮನದಲ್ಲಿಟ್ಟುಕೊಳ್ಳುವುದು:

- ದೈಹಿಕ ಮತ್ತು ಮಾನಸಿಕ ಆರೋಗ್ಯ ಮತ್ತು ಯೋಗಕ್ಷೇಮ

- ಸ್ವಯಂ ಮೌಲ್ಯ, ಆತ್ಮವಿಶ್ವಾಸ
- ಸೃಜನಶೀಲತೆ, ಸಮತೆ,
- ಶಾಂತಿ, ಸಾಮಾಜಿಕ ಸಾಮರಸ್ಯ
- ಲಿಂಗ, ಜಾತಿ, ವರ್ಗ ತಾರತಮ್ಯಗಳನ್ನು ತೊಡೆದು ಹಾಕುವುದು
- ಲಿಂಗ ಅಸಮಾನತೆ, ಅಡೆತಡೆಗಳನ್ನು ತೊಡೆದು ಹಾಕುವುದು
- ಮಾದಕ ವ್ಯಸನ ಮತ್ತು ಡಿಜಿಟಲ್ ವ್ಯಸನದಂತಹ ನಕಾರಾತ್ಮಕ ಸಾಮಾಜಿಕ ಅಭ್ಯಾಸಗಳನ್ನು ಎದುರಿಸುವುದು

ಈ ನಿಟ್ಟಿನಲ್ಲಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು "**ಅಂತರ ರಾಷ್ಟ್ರೀಯ ಆಟದ ದಿನ**"ದ ಅಂಗವಾಗಿ ಎಲ್ಲಾ ಮಕ್ಕಳಿಗೆ ಕ್ರೀಡಾ ಚಟುವಟಿಕೆಗಳನ್ನು ಗ್ರಾಮ ಪಂಚಾಯತಿಯ "ಅರಿವು ಕೇಂದ್ರ"ಗಳಲ್ಲಿ ಆಯೋಜಿಸಲು ನಿರ್ಧರಿಸಿದೆ.

**"ಓದುವ ಬೆಳಕು"** ಕಾರ್ಯಕ್ರಮದಡಿಯಲ್ಲಿ ಗ್ರಾಮ ಪಂಚಾಯತಿ ಅರಿವು ಕೇಂದ್ರಗಳಲ್ಲಿ ಹಲವಾರು ಅಭಿಯಾನಗಳ ಮೂಲಕ ಪ್ರತಿ ತಿಂಗಳು ಉಪಯುಕ್ತ ಚಟುವಟಿಕೆಯನ್ನು ಆಯೋಜಿಸಲಾಗುತ್ತಿದೆ. ಹೀಗೆ ಸೌಲಭ್ಯಗಳನ್ನು ಸದುಪಯೋಗ ಪಡಿಸಿಕೊಳ್ಳಲು ಅವಕಾಶ ಕಲ್ಪಿಸಲಾಗುತ್ತಿದೆ. ಅದರಂತೆ, "ಅರಿವು ಕೇಂದ್ರ"ಗಳಿಗೆ ಭೇಟಿ ನೀಡುವ ಮಕ್ಕಳಿಗೆ **2024 ಜೂನ್ 11** ರಂದು "ಅಂತರ ರಾಷ್ಟ್ರೀಯ ಆಟದ ದಿನ"ದ ಅಂಗವಾಗಿ- ಆಟದ ಹಕ್ಕನ್ನು ಸಂಭ್ರಮಿಸುವ ಸಲುವಾಗಿ ಕೆಳಕಂಡ ಚಟುವಟಿಕೆಗಳನ್ನು ಕೈಗೊಳ್ಳಲು ನಿರ್ಧರಿಸಲಾಗಿದೆ.

**ಮಕ್ಕಳ ಆಟದ ಹಕ್ಕನ್ನು ಸಾಕಾರಗೊಳಿಸಲು ಅಗತ್ಯ ಚಟುವಟಿಕೆಗಳು:**

- "ಅರಿವು ಕೇಂದ್ರ"ಗಳಿಗೆ ಕೇರಂ ಬೋರ್ಡ್, ಚೆಸ್ ಬೋರ್ಡ್, ಪಜಲ್, ಹಾವು ಏಣಿ ಆಟ, ಲೂಡೋ ಮತ್ತು ಪಗಡೆ ಆಟಗಳಿಗೆ ಸಂಬಂಧಿಸಿದ ಪರಿಕರಗಳನ್ನು ಪೂರೈಸುವುದು. ಆ ದಿನ ಮಕ್ಕಳು ಇವುಗಳನ್ನು ಬಳಸಿ ಆಟವಾಡಲು ಅವಕಾಶ ಮಾಡಿಕೊಡುವುದು.
- ಸ್ಥಳೀಯ ಆಟಗಳಾದ ಖೋಖೊ, ಕಬಡ್ಡಿ, ಥ್ರೋಬಾಲ್, ವಾಲಿಬಾಲ್, ಟೆನಿಕಾಯ್ಟ್ ಆಟಗಳನ್ನು ಸ್ಥಳಾವಕಾಶ ಮಾಡಿಕೊಂಡು ಆಯೋಜಿಸುವುದು.
- ಕ್ರಿಕೆಟ್ ಆಟವನ್ನು ಏರ್ಪಡಿಸುವುದು.
- ಗ್ರಾಮೀಣ ಸ್ಥಳೀಯ ಆಟಗಳಿಗಾಗಿ ಸ್ಥಳೀಯ ಆಟಗಾರರನ್ನು ಗುರುತಿಸುವುದು ಹಾಗೂ ಅವರಿಂದ ಮಕ್ಕಳಿಗೆ ಅಂತಹ ಆಟಗಳನ್ನು ಕಲಿಸಿಕೊಡಲು ಯೋಜಿಸುವುದು.
- ಕನಿಷ್ಠ ಜಿಲ್ಲಾ ಮಟ್ಟದಿಂದ ಮೇಲಿನ ಹಂತಕ್ಕೆ ಕ್ರೀಡೆ ಮತ್ತು ಆಟಗಳಲ್ಲಿ ಸಾಧನೆ ಮಾಡಿದ ಗ್ರಾಮ ಪಂಚಾಯತಿ ವ್ಯಾಪ್ತಿಯ ಮಕ್ಕಳನ್ನು ಗುರುತಿಸುವುದು ಹಾಗೂ ಅಭಿನಂದಿಸುವುದು.
- ಪ್ರತಿ ತಿಂಗಳು ವಿವಿಧ ವಿಷಯಗಳ (Theme) ಆಧಾರದಲ್ಲಿ ವಿವಿಧ ಆಟಗಳನ್ನು ಗುರುತಿಸುವುದು / ಅಭಿವೃದ್ಧಿಪಡಿಸುವುದು ಹಾಗೂ ಅಂತಹ ಆಟಗಳನ್ನು ಮಕ್ಕಳಿಗೆ ಆಡಿಸುವುದು.
- ಗ್ರಾಮ ಪಂಚಾಯಿತಿ ಅರಿವು ಕೇಂದ್ರಗಳ ಬಲವರ್ಧನೆಗಾಗಿ ಸಹಕರಿಸಿರುತ್ತಿರುವ ವಿವಿಧ ಸ್ವಯಂ ಸೇವಾ ಸಂಸ್ಥೆಗಳ - CWC,CMCA,APF,ಅಧ್ಯಯನ್ ಫೌಂಡೇಷನ್,ಆಕಾಂಕ್ಷ ಚಾರಿಟಬಲ್ ಟ್ರಸ್ಟ, ನೇಚರ್ ಕನ್ಸರ್ವೇಷನ್ ಫೌಂಡೇಷನ್, BGVS, ಇತ್ಯಾದಿ- ಸೇವೆಯನ್ನು ಪಡೆದುಕೊಳ್ಳುವುದು.
- ಜೂನ್ 11 ಹಾಗೂ ಮುಂದಿನ ದಿನಗಳಲ್ಲಿ ಆಟಕ್ಕೆ ಸಂಬಂಧಿಸಿದಂತೆ ನಡೆಸಿದ ಎಲ್ಲಾ ಚಟುವಟಿಕೆಗಳನ್ನು ವೀಡಿಯೊಗಳು ಮತ್ತು ಗುಣಮಟ್ಟದಿಂದ ಕೂಡಿದ

ಛಾಯಾಚಿತ್ರಗಳ ಮೂಲಕ ದಾಖಲಿಸಬೇಕು ಹಾಗೂ ಪಂಚತಂತ್ರ 2.0 ತಂತ್ರಾಂಶದಲ್ಲಿ ಅಪ್ಲೋಡ್ ಮಾಡುವುದು.

ಆಯುಕ್ತರು
ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ,
ಬೆಂಗಳೂರು.

**ಇವರಿಗೆ:**

1. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ.
2. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ (ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ)
3. ರಾಜ್ಯದ ಎಲ್ಲಾ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ (ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ)
4. ಗ್ರಾಮ ಪಂಚಾಯತಿ ಗ್ರಂಥಾಲಯ ಮೇಲ್ವಿಚಾರಕರುಗಳಿಗೆ(ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಮುಖಾಂತರ)
5. ಮಾಹಿತಿ ಕೇಂದ್ರ/ವೆಬ್ಸೈಟ್, ಗ್ರಾಅಪ ಇಲಾಖೆ.
6. ಮಾಹಿತಿ ಕೇಂದ್ರ/ವೆಬ್‌ಸೈಟ್, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು.
7. CWC, CMCA, APF, ಅಧ್ಯಯನ್ ಫೌಂಡೇಷನ್, ಆಕಾಂಕ್ಷ ಚಾರಿಟಬಲ್ ಟ್ರಸ್ಟ್, ನೇಚರ್ ಕನ್ಸರ್ವೇಷನ್ ಫೌಂಡೇಷನ್, BGVS ಸಂಸ್ಥೆಯವರುಗಳಿಗೆ.

**ಪ್ರತಿಯನ್ನು:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು(ಪಂ.ರಾಜ್) ಇವರ ಆಪ್ತ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಇವರ ಆಪ್ತ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಆಯುಕ್ತರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು ಇವರ ಆಪ್ತ ಸಹಾಯಕರಿಗೆ.
4. ಕಛೇರಿ ಪ್ರತಿ.